**ಇಂದು ದಿನಾಂಕ** *: 08.06.2023* **ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಮುಂದುವರಿದ ಪಾಟೀ ಸವಾಲು ಶ್ರೀ. ಸಿ.ಎನ್. ವಕೀಲರಿಂದಃ**

ನಿ.ಪಿ 03 ಮತ್ತು 4 ರ ಬಗ್ಗೆ ಕಂದಾಯ ಕಛೇರಿಯಲ್ಲಿ ಪ್ರಕ್ರಿಯೆಗಳು 2013-14 ರಲ್ಲಿ ನಡೆದಿರುತ್ತವೆ. ಅದರ ಬಗ್ಗೆ ದಾಖಲೆ ಹಾಜರು ಪಡಿಸಿದ್ದೇನೆ. ಮೊದಲು ಸರ್ವೆ ನಂ.47 ವಿಸ್ತೀರ್ಣ 87 ಎಕರೆ 9 ಗುಂಟೆ ಸರ್ಕಾರಿ ಗೋಮಾಳ ಎಂದರೆ ಸಾಕ್ಷಿ ನಾನು ಖರೀದಿ ಮಾಡುವ ಪೂರ್ವದಲ್ಲಿ ಗೋಮಾಳವಾಗಿತ್ತು ಎನ್ನುತ್ತಾರೆ. ನಾನು 4 ಎಕರೆ ಜಮೀನಿನಲ್ಲಿ 1985 ರಿಂದ ಸ್ವಾದೀನದಲ್ಲಿ ಇದ್ದೇನೆ. ಚೌಕೂರು ಗ್ರಾಮದ ಸರ್ವೆ ನಂ. 47 ರಲ್ಲಿ ನಾನು 4 ಎಕರೆ ಜಮೀನಿನಲ್ಲಿ 1985 ರಿಂದ ಸ್ವಾದೀನ ಇದ್ದೇನೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿದ್ದೇನೆ. ನನ್ನ 4 ಎಕರೆ ಜಮೀನಿಗೆ Mutation ಆಗಿರುತ್ತದೆ. ಅದು 2013-14 ನೇ ಸಾಲಿನಲ್ಲಿ ಆಗಿದೆ. Mutation ಹಾಜರು ಪಡಿಸಿದ್ದೇನೆ. ಅದರ ಸಂಖ್ಯೆ ಗೊತ್ತಿಲ್ಲ. 4 ಎಕರೆ ಜಮೀನಿಗೆ ನಾನು ಖರೀದಿಸುವ ಪೂರ್ವದಲ್ಲಿ ಮತ್ತು ಖರೀದಿಸಿದ ನಂತರ ಸರ್ಕಾರಕ್ಕೆ ಕಂದಾಯ ಕಟ್ಟಿದ್ದೇನೆ. ಅದರ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ಸರ್ವೆ ನಂ.47 ರಲ್ಲಿ 4 ಎಕರೆ ಜಮೀನು, ಸರ್ವೆ ನಂ.71 ಎಂದು 2013-14 ನೇ ಸಾಲಿನಲ್ಲಿ ಆಗಿರುತ್ತದೆ. ಅದರ ಬಗ್ಗೆ ಆಕಾರ ಬಂದ್ ಮತ್ತು Sketch ಹಾಜರು ಪಡಿಸಿದ್ದೇನೆ. ದಾವಾ ಎ ಷಡೂಲ್ ಆಸ್ತಿ ದೃಢಿಕರಿಸುವ ಬಗ್ಗೆ ದಾಖಲೆ ಹಾಜರು ಪಡಿಸಿದ್ದೇನೆ. ದಾವಾ ಬಿ ಷಡೂಲ್ ಆಸ್ತಿ ದೃಢಿಕರಿಸುವ ಬಗ್ಗೆ ದಾಖಲೆ ಇಲ್ಲ. ಸಾಕ್ಷಿ ಮುಂದುವರಿದು ಅದನ್ನು ಪ್ರತಿವಾದಿಯರು ಮಾರ್ಚ 2020 ರಲ್ಲಿ ವತ್ತುವರಿ ಮಾಡಿದ್ದಾರೆ. ಈ ಕಾರಣಕ್ಕೆ ದಾಖಲೆ ಇಲ್ಲ ಎನ್ನುತ್ತಾರೆ. ಆ ಸಮಯದಲ್ಲಿ ಕೊವಿಡ್ ಇದ್ದ ಕಾರಣ ಠಾಣೆಯಲ್ಲಿ ದೂರು ಕೊಡಲು ಆಗಲಿಲ್ಲ. 4 ಎಕರೆ ಜಮೀನಿನನ್ನು ಈಗ ನಾನೇ ಉಳಿಮೆ ಮಾಡಿಕೊಂಡು ಅದರಲ್ಲಿ ಕಾಫಿ ತೋಟ ಬೆಳೆಸಿದ್ದೇನೆ. ದಾವಾ ಆಸ್ತಿಯನ್ನು ನಾನು ಯಾವತ್ತು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡಲು ಸುಳ್ಳು ದಾಖಲೆಗಳನ್ನು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಕಂದಾಯ ಆಧಿಕಾರಿಗಳೊಂದಿಗೆ ಶಾಮಿಲ್ ಆಗಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ.20-03-2020 ರಲ್ಲಿ ಪ್ರತಿವಾದಿ ನಿಖರವಾಗಿ ಎಲ್ಲಿ

ವಾಸವಿದ್ದರು ಎಂದು ಹೇಳುಲು ಆಗುವುದಿಲ್ಲ. ನಿ.ಪಿ12 Village Map ಇರುತ್ತದೆ. ನಿ.ಪಿ 12 ಸರ್ವೆ ನಂ. 71 ರಿಂದ 81 ಜಮೀನುಗಳಿಗೆ ಸೇರಿದ್ದು ಇರುತ್ತದೆ. ದಾವೆ ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಗೆ ನೋಟಿಸ್ ಕೊಟ್ಟಿದ್ದೇನೆ. ಸದರಿ ನೋಟಿಸ್ ಅನ್ನು ಮಾಲಂಗಿ ವಿಳಾಸಕ್ಕೆ ಕಳುಹಿಸಿರುತ್ತೇನೆ. ನೋಟಿಸ್‌ನಲ್ಲಿ ವತ್ತುವರಿ ಮಾಡಿರುವ ಜಾಗವನ್ನು ಬಿಟ್ಟು ಕೊಡಿ ಎಂದು ಕೇಳಿರುತ್ತೇನೆ. ನೋಟಿಸ್‌ಗೆ ನಾನು ಸಹಿ ಮಾಡಿದ್ದೇನೆ. ದಾವೆ ಹೂಡಲು ಯಾವುದೇ ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ. ನೋಟಿಸ್ ಕೊಟ್ಟ ಒಂದು ತಿಂಗಳ ನಂತರದಲ್ಲಿ ಪ್ರತಿವಾದಿ ಉತ್ತರ ನೋಟಿಸ್ ಕೊಟ್ಟಿದ್ದಾರೆ. ಉತ್ತರ ನೋಟಿಸ್‌ನಲ್ಲಿ ಇರುವ ಅಂಶಗಳನ್ನು ತಿಳಿದುಕೊಂಡಿರುತ್ತೇನೆ. ಪೂರ್ವಕ್ಕೆ ನನ್ನ ಜಮೀನು, ಪಶ್ಚಿಮಕ್ಕೆ ಕಮಲಮ್ಮ ಕೋಂ ತಿಮ್ಮೆಗೌಡ ರವರ ಜಮೀನು, ಉತ್ತರಕ್ಕೆ ಬಸವೇಗೌಡ ರವರ ಜಮೀನು, ದಕ್ಷಿಣಕ್ಕೆ ನನ್ನ ಮತ್ತು ಕೃಷ್ಣೇಗೌಡ ರವರ ಜಮೀನು, ಈ ಮಧ್ಯೆ ಇರುವ ಜಮೀನು ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದು ಹೇಳುಲು ಆಗುತ್ತದೇಯಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಜಮೀನು ಮಾಲಂಗಿ ಗ್ರಾಮದ ಸರ್ವೆ ನಂ.62/14 ರ 2 ಎಕರೆ ಜಮೀನು ಆಗಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಮಾಲಂಗಿ ಗ್ರಾಮದ ಸರ್ವೆ ನಂ.62/14 ರ 2 ಎಕರೆ ಜಮೀನಿನ ಮೇಲೆ ನನಗೆ ಎನಾದರು ಹಿತಾಸಕ್ತಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪ್ರತಿವಾದಿಗೆ ಈ ಜಮೀನು ಬಿಟ್ಟು ಬೇರೆ ಯಾವುದೇ ಜಮೀನು ಇಲ್ಲ ಎನ್ನುವುದು ಗೊತ್ತಿಲ್ಲ. ಆಕೆ ಯಾವತ್ತು ನನ್ನ ಜಮೀನನ್ನು ವತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆಕೆ ಚೌಕೂರು ಗ್ರಾಮದ ನನ್ನ ಸರ್ವೆ ನಂ.71 ರ ಜಮೀನು ವತ್ತುವರಿ ಮಾಡಿದ್ದಾರೆ ಎನ್ನುತ್ತಾರೆ. ಆಕೆಯ ಸ್ವಾಧೀನದಲ್ಲಿ ಇರುವ ಜಮೀನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೇಯನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ 01 ರ ಪ್ರಕಾರ ನಾನು ಸರ್ವೆ ನಂ.47 ರಲ್ಲಿ 4 ಎಕರೆ ಜಮೀನನ್ನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ವತ್ತುವರಿ ಮಾಡಿದ್ದಾರೆ ಎಂದು ಹೇಳಿಕೊಂಡು ನಾನೇ ಆಕೆಯ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.ನಾನು ತೊಂದರೆ ಕೊಟ್ಟ ಕಾರಣ ಆಕೆ ನನ್ನ ಮೇಲೆ ಮೂಲ ದಾವೆ 103/22 ಅನ್ನು ಮಾಡಿದ್ದಾರೆ ಎಂದರೆ ಸರಿಯಲ್ಲ. ನಿ.ಪಿ 11 ರಲ್ಲಿ ಕ್ರಮ ಸಂಖ್ಯೆ01 ರಿಂದ 10

ನಮೂದು ಇದ್ದು ಅದರಲ್ಲಿ ಕ್ರಮ ಸಂಖ್ಯೆ 03 ರಿಂದ 05 ನಮೂದು ಇಲ್ಲ ಎಂದರೆ ಗೊತ್ತಿಲ್ಲ. ದಾವೇ ಸಲ್ಲಿಸಲು ನಿ.ಪಿ 11 ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
**ಪಿರಿಯಾಪಟ್ಟಣ**